# ಸುದೀಪ್ ಜೊತೆ ನಟಿಸೊ ಆಸೆ

**ವೀಣಾ ಕಾರ್ತಿಕ್**
ಉದಯದ 'ಗೌರಿಪುರದ ಗಯ್ಯಾಳಿಗಳು'ನ ರೇಖಾ



◆ **ಗೌರಿಪುರದ ಗಯ್ಯಾಳಿಗಳನ್ನು ನೋಡಿದವರು ನಿಮಗೆ ಬೈಯುತ್ತಾರಾ?**

ಮೂವರು ಗಯ್ಯಾಳಿಯರಲ್ಲಿ ನಾನು ಮೃದು ಸ್ವಭಾವದವಳು ಹಾಗಾಗಿ ಜನ ಕಿಂಡಲ್ ಮಾಡುವುದಿಲ್ಲ. ಮೂವರಲ್ಲಿ ನಾನೇ ಮುಗ್ಧೆ ಒಂದು ರೀತಿಯಲ್ಲಿ ಪೆದ್ದಿ ಕೂಡ. ಅವರಿಬ್ಬರು ದಾಳಿ ಮಾಡಲು ಯೋಜನೆಯನ್ನು ರೂಪಿಸುತ್ತಾರೆ. ಅದನ್ನು ನನ್ನ ಕಾಮಿಡಿ ಡೈಲಾಗ್ ಮೂಲಕವೇ ಶಮನ ಮಾಡುತ್ತಿರುತ್ತೇನೆ. ನನ್ನ ಪತಿ ಬಿಟ್ಟು ಹೋಗಿರುತ್ತಾನೆ. ಒಂಟಿ ಬಾಳು ನನ್ನದು, ಹಾಗಾಗಿ ಇವರ ಜೊತೆ ನೆಲೆಸಿರುತ್ತೇನೆ. ನಾವು ಒಂದೇ ಮನೆಯಲ್ಲಿ ಇದ್ದೇವೆ. ನಮ್ಮ ವಿರುದ್ಧ ಸೆಣೆಸಲು ಗುಲಾಬಿ ಪ್ರವೇಶ ಆಗುತ್ತದೆ. ಆಕೆಗೆ ಮದುವೆ ಆಗಿರುವುದಿಲ್ಲ. ಆದರೆ ಆಗಿದೆ ಎಂದು ಸುಳ್ಳು ಹೇಳುತ್ತಾಳೆ. ಅವರೆಲ್ಲ ಬಡ ಬಡ ಮಾತನಾಡುತ್ತಾರೆ. ಅವರ ಜಗಳ ಶಮನ ಮಾಡಿದರೂ ನಾನು ಅತ್ತ ಗುಲಾಬಿ ಕಡೆನೂ ಇರಲ್ಲ, ಇತ್ತ ಗಾಯ್ಯಾಳಿಯರ ಕಡೆನೂ ಇರಲ್ಲ.

◆ **ನಟಿಯಾಗಿ ರೂಪುಗೊಂಡಿದ್ದು ಹೇಗೆ?**

ಕಲಾವಿದೆ ಆಗುತ್ತೇನೆಂದು ಭಾವಿಸಿರಲಿಲ್ಲ. ಪಿಯುಸಿ ಓದುವಾಗ ಗೆಳತಿಯೊಬ್ಬಳು ಧಾರಾವಾಹಿಗಳ ಬಗ್ಗೆ ಹೇಳುತ್ತಿದ್ದಳು. ಅವಳಿಗೆ ಈ ಕ್ಷೇತ್ರದ ಕೆಲವರ ಪರಿಚಯವಿತ್ತು. ಪತ್ರಿಕೆಯ ಪ್ರಕಟಣೆಯೊಂದನ್ನು ನೋಡಿ ನಾನೂ ಪ್ರಯತ್ನ ಮಾಡೋಣವೆಂದು ಫೋಟೊ ಶೂಟ್ ಮಾಡಿಸಿ ಕಳಿಸಿಕೊಟ್ಟೆ. ವರ್ಷ ಕಳೆದರೂ ಅವಕಾಶ ಬರಲಿಲ್ಲ. ಅದೆಲ್ಲ ನನಗೆ ಅಲ್ಲ ಎಂದು ಸಮಾಧಾನ ಮಾಡಿಕೊಂಡು ಓದು ಮುಂದುವರಿಸಿದ್ದೆ. ನಂತರ ಒಂದೊಂದೇ ಕರೆಗಳು ಬರಲು ಶುರುವಾಯಿತು. ಒಂದೆರಡು ಧಾರಾವಾಹಿಯಲ್ಲಿ ಸಣ್ಣಪುಟ್ಟ ಪಾತ್ರಗಳನ್ನೂ ಮಾಡಿದೆ. ಪ್ರಮುಖ ಪಾತ್ರಗಳ ಕನಸಿನ ನನಗೆ ಅವು ಖುಷಿ ಕೊಡಲಿಲ್ಲ. ಹಾಗಾಗಿ ನಟನೆಯಿಂದ ಸ್ವಲ್ಪ ದೂರ ಉಳಿದೆ. ಇದೇ ಸಂದರ್ಭದಲ್ಲಿ 'ಕಾಮಿಡಿ ದರ್ಬಾರ್' ಮಾಡಲು ಅವಕಾಶ ಸಿಕ್ಕಿತು. ನಂತರ ಒಂದೊಂದೇ ಮುಖ್ಯ ಪಾತ್ರಗಳಿಗೆ ಅವಕಾಶಗಳು ಸಿಕ್ಕವು.

◆ **ಓದುವಾಗ ನಿಮಗೆ ಇದ್ದ ಕನಸು ಏನು?**

ಇದೇ ಆಗಬೇಕು ಎನ್ನುವ ಕನಸು ಇರಲಿಲ್ಲ. ಡಿಗ್ರಿ ಮುಗಿದ ನಂತರ ಯಾವುದಾದರು ಉದ್ಯೋಗ ಮಾಡಿದರಾಯಿತು ಎಂದಷ್ಟೇ ಯೋಚಿಸಿದ್ದೆ. ನನ್ನ ವಂಶದಲ್ಲಿ ಯಾರೂ ಕಲಾವಿದರು ಇರಲಿಲ್ಲ. ನನಗೆ ಎಲ್ಲದೂ ಹೊಸತು. ಅದೇ ಸಂದರ್ಭದಲ್ಲಿ ನಮ್ಮ ಸಂಬಂಧಿಗಳು ನನ್ನ ಆಸೆಯನ್ನು ಕಂಡು ಆಡಿಕೊಳ್ಳುತ್ತಿದ್ದರು. ಇವಳೇನು ದೊಡ್ಡದಾಗಿ ನಟಿಸಿಬಿಡುತ್ತಾಳೆ ಎಂದು ಹಂಗಿಸುತ್ತಿದ್ದರು. ಈಗ ಅವರೇ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ. ನಾನು ನಟಿಯಾಗಿ ರೂಪುಗೊಳ್ಳಲು ನನ್ನ ತಾಯಿ ಕಾರಣ. ನಾನು ನಿರಾಸೆಗೊಂಡಾಗೆಲ್ಲ ಮುಂದೆ ಒಳ್ಳೆಯ ಅವಕಾಶಗಳು ಸಿಗುತ್ತವೆ ಎದೆಗುಂದಬೇಡ ಎಂದು ಧೈರ್ಯದ ಮಾತುಗಳನ್ನು ಹೇಳಿದ್ದರಿಂದ ನಾನು ಕಲಾವಿದೆ ಆಗಲು ಸಾಧ್ಯ ಆಯಿತು.

◆ **ಬಣ್ಣದ ಲೋಕದ ಆರಂಭದ ದಿನಗಳು ಹೇಗಿದ್ದವು?**

ಆರಂಭದಲ್ಲಿ ಹೊಂದಾಣಿಕೆಯದ್ದೇ ಸಮಸ್ಯೆ ಆಗಿ ಕಾಡಿತು. ಏಕೆಂದರೆ ಗ್ರಾಮೀಣ ಮೂಲದ ನಾನು ಬೆಳೆದು ಬಂದ ಹಿನ್ನಲೆ ಮತ್ತು ಈ ಬಣ್ಣದ ಲೋಕದ ವಾತಾವರಣ ಸರಿ ಹೊಂದುತ್ತಿರಲಿಲ್ಲ. ಅವರ ಹಾಗೆ ಮಾತುಕತೆ ಮಾಡಲೂ ನನಗೆ ಬರುತ್ತಿರಲಿಲ್ಲ. ಇದೇ ಕಾರಣಕ್ಕೆ ಕೆಲವೊಂದು ಅವಕಾಶಗಳು ಕೈ ತಪ್ಪಿದ್ದವು. ಕ್ರಮೇಣ ಒಂದೊಂದೇ ಕಲಿಯುತ್ತಾ ಬಂದೆ. ಶ್ರಮಪಟ್ಟು ಕಲಿತು ಅಭಿನಯವನ್ನು ಮಾಡುತ್ತಿದ್ದೇನೆ. ಮೊದಲು ಎಷ್ಟೊಂದು ಆಡಿಷನ್ ನೀಡಿದ್ದಿದೆ. ಆದರೆ ಅವಕಾಶಗಳು ಸಿಗುತ್ತಿರಲಿಲ್ಲ. ಈಗ ಅವೇ ಹುಡಿಕೊಂಡು ಬರುತ್ತಿವೆ.

◆ **ಸಿನಿಮಾ ಬಗ್ಗೆ ಹೇಳುವುದಾದರೆ...**

ಸಿನಿಮಾದ ಸಂಪರ್ಕ ಹೆಚ್ಚು ಇಲ್ಲ. ಮೂರು ಸಿನಿಮಾ ಮಾಡಿದ್ದೇನೆ. ಒಂದರಲ್ಲಿ ಸುಧಾರಾಣಿಯ ತಂಗಿ, ಮತ್ತೊಂದರಲ್ಲಿ ನಾಯಕನ ತಂಗಿಯಾಗಿದ್ದೆ. ನಾಯಕಿಯಾಗಿಯೂ ಒಂದರಲ್ಲಿ ನಟಿಸಿದ್ದೇನೆ. ಆದರೆ ಹೇಳುವಂತಹ ಬ್ರೇಕ್ ನನಗೆ ಸಿಗಲಿಲ್ಲ. ಈಗ ಒಂದು ಸಿನಿಮಾ ಮಾಡುತ್ತಿದ್ದೇನೆ. ಅದನ್ನು ಈಗಲೇ ಹಳುವುದಿಲ್ಲ. ಕೊರೊನಾ ಕಾರಣಕ್ಕೆ ಚಿತ್ರೀಕರಣವೂ ನಿಂತಿದೆ. ಕಲಾವಿದರಿಗೆ ಕಳೆದ ಒಂದು ವರ್ಷ ಸರಿಯಾಗಿ ಕೆಲಸ ಇರಲಿಲ್ಲ. ಇನ್ನೇನು ಈ ವರ್ಷ ಕೆಲಸ ಆರಂಭವಾಗುತ್ತಿದೆ ಎನ್ನುವ ಹೊತ್ತಿಗೆ ಮತ್ತೆ ವಿಧಿಯಾಟ ಆರಂಭವಾಗಿದೆ. ಇದೆಲ್ಲ ತುಂಬ ಬೇಸರವನ್ನು ಉಂಟುಮಾಡುತ್ತದೆ.

◆ **ಮುಂದೆ ಇಂತಹ ಪಾತ್ರ ಮಾಡಬೇಕು ಎನ್ನುವ ಆಸೆ ಏನಾದರೂ ಇದೆಯಾ?**

ಇಂತಹ ಒಂದು ಪಾತ್ರವನ್ನು ಮಾಡಲೇಬೇಕು ಎನ್ನುವ ಕನಸನ್ನು ನಾನು ಕಂಡಿಲ್ಲ. ಯಾವುದೇ ಪಾತ್ರವಾದರೂ ನಾನು ಮಾಡುತ್ತೇನೆ. ಎಂತಹ ಪಾತ್ರಕ್ಕಾದರೂ ಜೀವ ತುಂಬುವುದು ಕಲೆ ಎಂದುಕೊಂಡಿದ್ದೇನೆ. ಸಿಕ್ಕ ಅವಕಾಶಕ್ಕೆ ನ್ಯಾಯ ನೀಡಬೇಕು. ಇರುವ ಒಂದು ಆಸೆ ಏನೆಂದರೆ ಸುದೀಪ್ ಅವರ ಜೊತೆ ನಟಿಸಬೇಕು. ಜೀವನದಲ್ಲಿ ಒಮ್ಮೆಯಾದರೂ ಖಂಡಿತ ನಟಿಸುತ್ತೇನೆ ಎನ್ನುವ ವಿಶ್ವಾಸವೂ ನನಗಿದೆ.

◆ **ನಿಮ್ಮ ಬಗ್ಗೆ ನೀವು ಹೇಳುವುದಾದರೆ...**

ಹುಟ್ಟಿ ಬೆಳೆದದ್ದು ಪಾಂಡವಪುರದ ಹತ್ತಿರದ ಹೊಸಕೋಟೆ ಎಂಬ ಹಳ್ಳಿ. ನನ್ನ ಅಜ್ಜಿ ಆಶ್ರಯದಲ್ಲಿ 14 ವರ್ಷ ಬೆಳೆದೆ. ಅಪ್ಪ– ಅಮ್ಮ ಬೆಂಗಳೂರಿನಲ್ಲಿ ಇದ್ದರು. 8ನೇ ತರಗತಿಯ ನಂತರ ನನ್ನ ಪೋಷಕರ ಜೊತೆ ಬೆಳೆದೆ. ನನಗೊಬ್ಬ ಮಗನಿದ್ದಾನೆ. ನನ್ನ ಪತಿ ಖಾಸಗಿ ಕಂಪನಿಯಲ್ಲಿ ಕೆಲಸ ಮಡುತ್ತಾರೆ. ಅವರಿಗೆ ನಿರ್ದೇಶನ ಮತ್ತು ಚಿತ್ರಕತೆ ಬರೆಯುವ ಆಸಕ್ತಿಯಿದೆ. ನನ್ನ ಅಭಿನಯಕ್ಕೆ ಅವರು ಬೆನ್ನೆಲುಬಾಗಿ ನಿಂತಿದ್ದಾರೆ. ನನಗೂ ನಿರ್ದೇಶನದ ಮೋಹ ಇದೆ. ವೆಬ್ ಸೀರಿಸ್ ಆರಂಭಿಸುತ್ತಿದ್ದೇನೆ. 'ಗಯ್ಯಾಳಿ'ಯ ಕಾರಣಕ್ಕೆ ಸಮಯ ಆಗುತ್ತಿರಲಿಲ್ಲ. ಒಂದಿಷ್ಟು ಚಿತ್ರೀಕರಣ ಮಾಡಿದ್ದೇವೆ. ಇನ್ನೂ ಎಡಿಟ್ ಮಾಡಿಲ್ಲ.

■ **ರಾಘವೇಂದ್ರ ಕೆ.**